# ಶಿವಶರಣೆಯರ ಸ್ತ್ರೀ ಸಂವೇದಿ ನೆಲೆಗಳು

ನವೀನ ಆರ್. ಭಟ್

ಸಂಶೋಧನಾ ವಿದ್ಯಾರ್ಥಿ, ಶ್ರೀನಿವಾಸ ವಿಶ್ವವಿದ್ಯಾಲಯ, ಪಾಂಡೇಶ್ವರ, ಮಂಗಳೂರು.

DOI: https://doi.org/10.5281/zenodo.18785748

## ABSTRACT:

12ನೇ ಶತಮಾನದ ವಚನ ಚಳುವಳಿಯು ಸಾಮಾಜಿಕ ಕ್ರಾಂತಿಯ ಜೊತೆಗೆ ಸ್ತ್ರೀ ಸಮಾನತೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಭದ್ರ ಬುನಾದಿ ಹಾಕಿತು. ಅನುಭವ ಮಂಟಪದ ಪ್ರಭಾವದಿಂದ ಮಹಿಳೆಯರು ಕೌಟುಂಬಿಕ ಚೌಕಟ್ಟನ್ನು ಮೀರಿ ಆಧ್ಯಾತ್ಮಿಕ ಮತ್ತು ಬೌದ್ಧಿಕ ಎತ್ತರಕ್ಕೇರಿದರು. ಬಸವಣ್ಣನವರ ಧರ್ಮಪತ್ನಿ ನೀಲಮ್ಮನ ತಾತ್ವಿಕ ನಿಲುವು, ಮುಕ್ತಾಯಕ್ಕನ ವೈಚಾರಿಕ ಪ್ರಜ್ಞೆ ಮತ್ತು ಅಕ್ಕಮ್ಮನ ಕಾಯಕ ನಿಷ್ಠೆಗಳು ವಚನ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ವಿಶಿಷ್ಟ ನೆಲೆಗಳನ್ನು ಅನಾವರಣಗೊಳಿಸುತ್ತವೆ. ಮೂಢನಂಬಿಕೆಗಳ ನಿವಾರಣೆ, ನಡೆ-ನುಡಿಗಳ ಶುದ್ಧತೆ ಮತ್ತು ಕಾಯಕದ ಮಹತ್ವವನ್ನು ಸಾರುವಲ್ಲಿ ಈ ಶರಣೆಯರ ಪಾತ್ರ ಹಿರಿದು. ಪಿತೃಪ್ರಧಾನ ವ್ಯವಸ್ಥೆಯ ನಡುವೆಯೂ ಮಹಿಳೆಯರು ತಮ್ಮ ಸ್ವಂತಿಕೆ ಹಾಗೂ ಅಸ್ಮಿತೆಯನ್ನು ರೂಪಿಸಿಕೊಂಡ ಬಗೆ ಮತ್ತು ಅವರ ಸಾಹಿತ್ಯಿಕ ಕೊಡುಗೆಯ ಮಹತ್ವವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

## KEYWORDS:

ವಚನ ಸಾಹಿತ್ಯ, ಶಿವಶರಣೆಯರು, ಸ್ತ್ರೀ ಸಂವೇದನೆ, ಕಾಯಕ ನಿಷ್ಠೆ, ವೈಚಾರಿಕ ಪ್ರಜ್ಞೆ.

**ಪೀಠಿಕೆ:**

ವಚನ ಸಾಹಿತ್ಯ 12ನೇ ಶತಮಾನದಲ್ಲಿ ಆರಂಭವಾದರೂ ಪ್ರಸಕ್ತ ಸನ್ನಿವೇಶಕ್ಕೆ ಸಮಕಾಲೀನ ಸಮಸ್ಯೆಗಳ ಸಿದ್ಧ ಔಷಧಿಯಂತೆ ಅತ್ಯುತ್ತಮ ಚಿಕಿತ್ಸೆಯು ಪ್ರಸ್ತುತವಾಗಿದೆ. ಇವು ಸರ್ವಕಾಲಿಕ ಮೌಲ್ಯಗಳಾಗಿ ಸಮಕಾಲೀನ ಸಮಸ್ಯೆಗಳಿಗೆ ಮಾರ್ಗೋಪಾಯಗಳಾಗಿವೆ. ಜಾತಿ ಭೇದ ಪದ್ಧತಿಗಳು ಭಾರತವನ್ನು ವಿನಾಶದತ್ತ ಕೊಂಡೊಯ್ಯುದಂತೆ, ಕ್ಲಿಷ್ಟ ಸನ್ನಿವೇಶದಲ್ಲಿ ಭಾರತೀಯ ಸಮಾಜಕ್ಕೆ ಹೊಸ ಸಮರ್ಥ, ಬಲಾಢ್ಯ, ಚಿಂತಕ, ದಾರ್ಶನಿಕ, ಮಾರ್ಗದರ್ಶನದ ಅನಿವಾರ್ಯತೆಯನ್ನು ಸೃಷ್ಟಿಸಿದ ಸಂಕಷ್ಟ ಸಮಯದಲ್ಲಿ ಉದಯಿಸಿದ ಬೆಳಕೇ ವಚನ ಸಾಹಿತ್ಯ.

ವಚನಗಳು ಕಳೆ ಕಿತ್ತು, ಕೃಷಿ ಮಾಡಿ ಜೀವನೋಪಾಯಕ್ಕಾಗಿ ಬೆಳೆದ ಆಹಾರ ಧಾನ್ಯಗಳಂತೆ ಬದುಕಿಗೆ ಉತ್ತಮ ಮಾರ್ಗವನ್ನು ತೋರಿವೆ. ವಚನ ಸಾಹಿತ್ಯ ಸಂಪ್ರದಾಯಕ್ಕಿಂತ ಅನುಭವಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿ ಕರ್ನಾಟಕದಲ್ಲಿ ದೊಡ್ಡ ಕ್ರಾಂತಿಯನ್ನು ಮಾಡಿ ವಿಶ್ವ ಧರ್ಮದ ಸಾಲಿನಲ್ಲಿ ನಿಂತಿದೆ. ಅಂದಿನ ಕಾಲಘಟ್ಟದಲ್ಲಿದ್ದ ರಾಜ ಪ್ರಭುತ್ವದ ಕಿರುಕುಳ, ಸಾಮಾನ್ಯ ಜನರನ್ನು ಮೂರನೇ ದರ್ಜೆಯವರಂತೆ ಕಾಣುವ ಪಂಡಿತಶಾಹಿ ವರ್ಗದವರು, ಸಮಾಜದಲ್ಲಿ ಮೂಢನಂಬಿಕೆಗಳು, ಆಚಾರ ವಿಚಾರಗಳಲ್ಲಿ ಅಂಧಾನುಕರಣೆ ಹೊಂದಿದವರು ಇನ್ನೂ ಮುಂತಾದ ಸಾಮಾಜಿಕ ಪಿಡುಗುಗಳ ನಿವಾರಣೆಗಾಗಿ ಪ್ರಗತಿಪರವಾಗಿ ಆಲೋಚಿಸುವ ಮನುಷ್ಯನ ಜೀವನ ಕ್ರಮವನ್ನು ಮಾನವೀಯ ನೆಲೆಯಲ್ಲಿ ಸುಧಾರಿಸುವುದು ವಚನಕಾರರ ಗುರಿಯಾಗಿತ್ತು. ಕಂದಾಚಾರಗಳು, ತಾರತಮ್ಯ, ಸ್ತ್ರೀ ಅಸಮಾನತೆ, ವೃತ್ತಿ ತಾರತಮ್ಯ, ವರ್ಗಭೇದ, ಭಾಷಾ ವೈಷಮ್ಯಗಳು, ಹಲವು ದೈವ ಆರಾಧನೆ, ಧರ್ಮ ಧರ್ಮಗಳಲ್ಲಿದ್ದ ಕಚ್ಚಾಟ ಇವುಗಳೆಲ್ಲವನ್ನೂ ಮೀರಿ ಶೋಷಿತ ಸಮುದಾಯಗಳನ್ನು ಒಟ್ಟುಗೂಡಿಸಿ, ಅವುಗಳನ್ನು ಸಮಾಜದ ಮುಖ್ಯ ಭೂಮಿಕೆಗೆ ತರುವುದು ವಚನಕಾರರ ಕನಸಾಗಿತ್ತು. ಹೀಗೆ ಹೊಸ ಸಮಾಜವನ್ನು ಕಟ್ಟುವಾಗ ನವ ಸಮಾಜಕ್ಕೆ ಬೇಕಾದ ಪರಿಕರಗಳನ್ನು ತಮ್ಮ ಬದುಕಿನಾಳದ ಅನುಭವ ನೆಲೆಯಿಂದಲೇ ವಚನಕಾರರ ಜೊತೆಗೆ ವಚನಕಾರ್ತಿಯರು ತಮ್ಮ ವಚನಗಳ ಮೂಲಕ ಕಂಡುಕೊಂಡರು.

**ವಚನಕಾರ್ತಿಯರ ಪ್ರಧಾನ ಆಶಯ:**

ವಚನಕಾರರು ಸ್ತ್ರೀಯರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯ ನೀಡುವುದರ ಜೊತೆಗೆ ಕಾಯಕದಾಸೋಹ ಮತ್ತು ಆಧ್ಯಾತ್ಮದ ಸಮಾನತೆಯನ್ನು ನೀಡಿದ್ದರು. ಮಹಿಳೆಯರು ಮತ್ತು ಸಮಾಜದ ಹಿಂದುಳಿದ ವರ್ಗಗಳಿಂದ ಬಂದ ಸಾಮಾನ್ಯರೂ ಕೂಡಾ ಎಂತಹ ಬೌದ್ಧಿಕ, ಆಧ್ಯಾತ್ಮಿಕ ಎತ್ತರಕ್ಕೆ ಏರಬಲ್ಲರು ಎಂಬುದನ್ನು 12ನೇ ಶತಮಾನದ ಕ್ರಾಂತಿ ನಿಚ್ಚಳವಾಗಿ ಕಾಣುತ್ತದೆ. 'ಹೆಣ್ಣು' ಗಂಡಿನ ಪಾಲಿಗೆ ಕೇವಲ ಮೋಹದ ವಸ್ತು ಅಥವಾ ಸಹಧರ್ಮಿಣಿ ಮಾತ್ರವಲ್ಲ, ಅವಳು ಅವನ ಬದುಕಿನಲ್ಲಿ ಬೌದ್ಧಿಕವಾಗಿ ಭಾಗವಹಿಸುವ ವಿಚಾರ, ಪುರುಷರಂತೆಯೇ ಸ್ತ್ರೀಯರು ವಚನಗಳ ರಚನೆಗೆ ತೊಡಗಿದ್ದು ಅವರಿಗೆ

ದೊರಕಿದ ಆಲೋಚನಾ ಸ್ವಾತಂತ್ರ್ಯದ ಚಿಹ್ನೆಯಾಗಿದೆ. ಕಾಲಾನುಕ್ರಮದಲ್ಲಿ ಮೊದಲ ವಚನಕಾರ್ತಿಯೆಂದರೆ 'ದುಗ್ಗಲೆ'. ಆದರೆ ಅತ್ಯಂತ ಶ್ರೇಷ್ಠ ವಚನಗಳನ್ನು ನೀಡಿ ಶ್ರೇಷ್ಠ ವಚನಕಾರ್ತಿ ಎನಿಸಿಕೊಂಡವಳು ಅಕ್ಕಮಹಾದೇವಿ. ಅದೇ ರೀತಿಯಾಗಿ ಮುಕ್ತಾಯಕ್ಕ ಮತ್ತು ನೀಲಮ್ಮ ವಚನಕಾರ್ತಿಯರು ತಮ್ಮದೇ ಆದ ಸ್ಥಾನಮಾನವನ್ನು ಪಡೆದುಕೊಂಡಿದ್ದಾರೆ. ಅತ್ಯಂತ ಭಾವುಕ ಸ್ವಭಾವದವಳಾದ ನೀಲಮ್ಮ, ಸುಕೋಮಲವಾದ ಮನಸ್ಸು, ತೀವ್ರವಾದ ಭಾಷೆ, ಪ್ರಸನ್ನವಾದ ಪದಶೈಲಿಯಾಗಿ ಗುರುತಿಸಿಕೊಂಡಿದ್ದಾಳೆ. ಮುಕ್ತಾಯಕ್ಕನಲ್ಲಿ ಯಾವುದೇ ರೀತಿಯ ಭಾವುಕತೆಯಾಗಲಿ, ಭಕ್ತಿಮಾರ್ಗವಾಗಲಿ ಇಲ್ಲ. ಆಕೆ ಬುದ್ಧಿಜೀವಿ; ಯಾವುದನ್ನೂ ಪರೀಕ್ಷಿಸದೇ, ಪ್ರಶ್ನಿಸದೇ, ತನಗೆ ಒಪ್ಪಿಗೆಯಾಗದೇ ಅಂಗೀಕರಿಸುತ್ತಿರಲಿಲ್ಲ.

**ನೀಲಮ್ಮ:**

ನೀಲಾಂಬಿಕೆ, ನೀಲಲೋಚನೆ ಈ ಹೆಸರುಗಳಿಂದ ಪ್ರಖ್ಯಾತಳಾದ ಬಸವಣ್ಣನ ಎರಡನೇ ಪತ್ನಿ. ಈಕೆಯ ವಚನಗಳು ಅಷ್ಟಾಗಿ ಕಂಡು ಬಂದಿಲ್ಲ. ಸಾಮಾಜಿಕ ಸುಧಾರಣೆಯ, ಧಾರ್ಮಿಕ ಜಾಗೃತಿಯ ಜವಾಬ್ದಾರಿಯನ್ನು ಹೊತ್ತು ಬಸವಣ್ಣನಿಗೆ ಒತ್ತಾಸೆಯಾಗಿ, ಸಹಧರ್ಮಿಣಿಯಾಗಿ ನೀಲಮ್ಮ ಬಸವಣ್ಣನ ಜೊತೆಗೂಡಿದ್ದಳು. ಕಲ್ಯಾಣ ಕ್ರಾಂತಿ ಸಂದರ್ಭದಲ್ಲಿ ಈಕೆ ತಂಗಡಗಿಯಲ್ಲಿ ಐಕ್ಯಳಾದಳು ಎಂಬ ಪ್ರತೀತಿ ಇದೆ. ನೀಲಮ್ಮನ ವಚನಗಳ ಅಂಕಿತ– 'ಸಂಗಯ್ಯ'.

ನೀಲಮ್ಮ ಬರೆದಿರುವ ಸುಮಾರು 126 ವಚನಗಳು ನಮಗೆ ದೊರೆತಿವೆ. ಅವುಗಳಲ್ಲಿ ಅತಿ ಹೆಚ್ಚು ವಚನಗಳು ಬಸವಣ್ಣನ ಸ್ತುತಿ ಮತ್ತು ಆತನ ಅಗಲಿಕೆಯನ್ನು ಧ್ವನಿಸುತ್ತವೆ. 'ಬಸವನ ಅನುಭವದಿಂದ ವಿಚಾರಪತ್ನಿಯಾದೆನಯ್ಯ' ಎಂಬ ಈಕೆಯ ವಚನಗಳಲ್ಲಿ ಕಂಡು ಬರುವ 'ಮಾತಿನ ಹಂಗೇತಕೆ, ಮನವು ಏಕಾಂತದಲಿ ಮಿಂದ ಬಳಿಕ' ಎಂಬಂತಹ ವಾಕ್ಯಗಳು ಈಕೆಯ ಅನುಭಾವದ ಎತ್ತರವನ್ನು, ಅಭಿವ್ಯಕ್ತಿಯ ವಿಸ್ತಾರವನ್ನು ಎತ್ತಿ ತೋರಿಸುತ್ತವೆ. ಹೀಗೆ ಕಲ್ಯಾಣದ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸಿ ವಚನಗಳ ರಚನೆಯಲ್ಲಿ ನೇರವಾಗಿ ತೊಡಗಿಸಿಕೊಂಡ ನೀಲಮ್ಮ ವಚನಕಾರ್ತಿಯರಲ್ಲಿ ಪ್ರಮುಖವಾದ ಸ್ತ್ರೀ.

**ನಾಡಾಳು ಹೋದರೆ**
**ಆ ನಾಡು ಆಳುವ ಒಡೆಯಂಗೆ ನಾಡೇ**
**ಹಾಗೆಯಾಯಿತ್ತು.**
**ಹಗೆ ಅಳಿದು ನಿಸ್ಸಂಗವಾಯಿತ್ತು**
**ನಿಸ್ಸಂಗವೇದ್ಯವಾಗಿ ಸಂಗಯ್ಯನಲ್ಲಿ ಮುಕ್ತಳಾದೇನು ನಾನು.**

ಅಧಿಕಾರದ ಆಸೆಯುಳ್ಳವರಿಗೆ ಅಧಿಕಾರವೇ ಶಾಪವಾಗುವಿಕೆಯ ಸಾಧ್ಯತೆಯನ್ನು ಈ ವಚನ ಹೇಳುತ್ತದೆ. ಬದುಕಿನ ಸಂಗತಿಗಳಿಗೆ ಪೂರ್ತಿಯಾಗಿ ತೊಡಗಿಸಿಕೊಳ್ಳದೆ ಹಾಗೆಯೇ ಅದನ್ನು ಪೂರ್ತಿ ನಿರಾಕರಿಸದೆ ದೈವದ ಸಾಂಗತ್ಯದಲ್ಲಿ ಬದುಕುವುದರ ಮೂಲಕ ಮುಕ್ತಿ ಪಡೆಯುವಿಕೆಯನ್ನು ಈ ವಚನದಲ್ಲಿ ಹೇಳಲಾಗಿದೆ.

ರಾಜ್ಯವನ್ನು ಇಷ್ಟಪಡುವ ರಾಜನಿಗೆ ರಾಜ್ಯವೇ ಉರುಳಾದ ರೀತಿ ಬದುಕಿನ ಸುಖಗಳಿಗೆ ಮರುಳಾಗಿರುವವರು ಮುಕ್ತಿ ಪಡೆಯಲು ಸಾಧ್ಯವಿಲ್ಲ ಎಂಬುದು ಈ ವಚನದ ಅರ್ಥ.

**ಮುಕ್ತಾಯಕ್ಕ:**

‘ಅಜಗಣ್ಣ ತಂದೆ’ ಎಂಬ ಅಂಕಿತನಾಮವಿರುವ 37 ವಚನಗಳನ್ನು ರಚಿಸಿರುವ ಅನುಭಾವ ನೆಲೆಯಿರುವ ಶಿವಶರಣೆ ಮುಕ್ತಾಯಕ್ಕ. ಈಕೆಯ ಊರು ಲಕ್ಕುಂಡಿ. ಈಕೆಯ ಸೋದರ ಅಜಗಣ್ಣನೂ ಶಿವಭಕ್ತ ಹಾಗೂ ಆತನೂ ಕೂಡಾ ವಚನಕಾರ. ಮುಕ್ತಾಯಕ್ಕನಿಗೆ ಅಣ್ಣನೇ ಗುರು, ಅಣ್ಣನ ಬಗ್ಗೆ ಇದ್ದ ಅಭಿಮಾನದಿಂದ ಆತನ ಹೆಸರನ್ನೇ ತನ್ನ ಅಂಕಿತನಾಮವನ್ನಾಗಿ ಮಾಡಿಕೊಂಡಿದ್ದಾಳೆ. ಮುಕ್ತಾಯಕ್ಕನಲ್ಲಿ ದಿಟ್ಟವಾದ ನಿಲುವನ್ನು ಗುರುತಿಸಬಹುದು. ಅಲ್ಲಮನನ್ನು ಎಲ್ಲರೂ ನೇರವಾಗಿ ಗುರು ಎಂದು ಒಪ್ಪಿಕೊಂಡರೆ ಈಕೆ ಮಾತ್ರ ಅಲ್ಲಮನನ್ನು ಪರೀಕ್ಷಿಸಿ ನಂತರ ಗುರು ಎಂದು ಕರೆಯುತ್ತಾಳೆ. ಮುಕ್ತಾಯಕ್ಕನ ಬಗ್ಗೆ ಚಿದಾನಂದ ಮೂರ್ತಿಗಳು ಹೀಗೆ ಹೇಳಿದ್ದಾರೆ: “ಅಕ್ಕಮಹಾದೇವಿಯಲ್ಲಿರುವ ಭಾವುಕತೆಯಾಗಲಿ, ಭಕ್ತಿ ಮಾರ್ಗವಾಗಲಿ ಇವಳಿಗಿಲ್ಲ. ಇವಳದು ಮುಖ್ಯವಾಗಿ ಪ್ರಶ್ನಿಸುವ, ಸವಾಲು ಹಾಕುವ, ಒಪ್ಪಿಕೊಳ್ಳಲು ಸಿದ್ಧವಾಗಿರುವ ಮುಕ್ತ ಮನಸ್ಸು.” ಈ ದೃಷ್ಟಿಯಿಂದ ನೋಡಿದಾಗ ಮುಕ್ತಾಯಕ್ಕ ಆಧುನಿಕರ ವೈಚಾರಿಕತೆಗೆ ಪ್ರತೀಕವಾಗಿದ್ದಾಳೆ. ಬೌದ್ಧಿಕ ಪ್ರವೃತ್ತಿಯಲ್ಲಿ ಅವಳ ಸಮಕ್ಕೆ ಬರುವ ಮತ್ತೊಬ್ಬ ವಚನಕಾರ್ತಿ ಪ್ರಾಯಶಃ ಸಿಗಲಾರಳು. ಅಜಗಣ್ಣ ಲಿಂಗೈಕ್ಯನಾದ ಪ್ರಸಂಗದಲ್ಲಿ ವ್ಯಕ್ತಪಡಿಸಿರುವ ವಚನಗಳು ಮುಕ್ತಾಯಕ್ಕನವೇ ಆಗಿವೆ. ಅಣ್ಣನ ಶವವನ್ನು ತೊಡೆಯ ಮೇಲಿಟ್ಟು ದುಃಖಿಸುತ್ತಾಳೆ.

**ನೀರ ಬೊಂಬೆಗೆ ನಿರಾಕಾರದ ಗೆಜ್ಜೆಯ ಕಟ್ಟಿ**
**ಬಯಲ ಬೊಂಬೆಯ ಕೈಯಲ್ಲಿ ಕೊಟ್ಟು**
**ಮುದ್ದಾಡಿಸುತ್ತಿರ್ದನಯ್ಯಾ**
**ಕರ್ಪೂರದ ಪುತ್ಥಳಿಗೆ ಅಗ್ನಿಯ ಸಿಂಹಾಸನವಿಕ್ಕೆ**
**ಅಗ್ನಿ ಕರಗಿ ಕರ್ಪೂರ ಉಳಿದುದಕ್ಕೆ ಬೆರಗಾದೆನಯ್ಯಾ**
**ಎನ್ನ ಅಜಗಣ್ಣನ ಯೋಗಕ್ಕೆ.**

ಇಲ್ಲಿರುವ ಪದಗಳಿಗೆ ಅರ್ಥದ ಪದರವುಂಟು. ಅಜಗಣ್ಣ ತನ್ನ ಅಗತ್ಯವಾದ ದೇಹಕ್ಕೆ ನಿರಾಕಾರದ ಗೆಜ್ಜೆಯನ್ನು ಕಟ್ಟಿ, ಶೂನ್ಯದ ಕೈಯಲ್ಲಿ ಮುದ್ದಾಡಲು ಕೊಟ್ಟಿದ್ದಾನಂತೆ. ಅವನ ಪಂಚಮಹಾಭೂತವಾದ ದೇಹವೆಂಬ ಕರ್ಪೂರದ ಗೊಂಬೆಗೆ ಜ್ಞಾನದ ಸಿಂಹಾಸನವಾಯಿತು. ಲೋಕದಲ್ಲಿ ನ್ಯಾಯವಾಗಿ ಕರ್ಪೂರ ಕರಗಬೇಕು, ಅಗ್ನಿ ಉರಿಯಬೇಕು. ಇಲ್ಲಿ ಸಹಜಕ್ಕೆ ವಿಪರೀತವಾಯಿತು. ಅಗ್ನಿಯೇ ಕರಗಿತು, ಕರ್ಪೂರ ಉಳಿಯಿತು. ಅಜಗಣ್ಣನ ಸಾವನ್ನು ನಿರೂಪಿಸುವ ಮುಕ್ತಾಯಕ್ಕನ ಬೆಡಗಿನ ರೀತಿ ಇದು.

ಮುಕ್ತಾಯಕ್ಕನಿಗೆ ಮೇಲಿನ ಬೆಡಗಿನ ಭಾಷೆ ತೀರಾ ಸಹಜವಾದುದು.

ಭಾಷೆಯ ಸಾಧ್ಯತೆಗಳು ಆಕೆಗೆ ತಿಳಿದಿದೆ. ಅವಳ ಆಲೋಚನೆಯಷ್ಟೇ ಅವಳ ಭಾಷೆಯು ಸ್ಫಟಿಕದಂತೆ ಸ್ವಚ್ಛ, ಕತ್ತಿಯಂತೆ ತೆಳು ಅದರ ಹರಿತ. ಅವಳ ವಚನಗಳಲ್ಲಿ ಆಲೋಚನೆ ಮುಖ್ಯವಾಗಿ ಕಾವ್ಯತ್ವ ಅದಕ್ಕೆ ಪೋಷಕವಾಗಿದೆ. ಮುಕ್ತಾಯಕ್ಕನ ಎರಡನೇ ವಚನ ಹೀಗಿದೆ;

**ನುಡಿಯಲು ಬಾರದ ಕೆಟ್ಟ ನುಡಿಗಳು**
**ನಡೆಯಲು ಬಾರದು ಕೆಟ್ಟ ನಡೆಗಳ**
**ನುಡಿದಡೇನು ನುಡಿಯದಿರ್ದಡೇನು?**
**ಹಿಡಿದ ವ್ರತ ಬಿಡದಿರಲು, ಅದೇ**
**ಮಹಾಜ್ಞಾನದಾಚರಣೆ ಎಂಬೆನು ಅಜಗಣ್ಣ ತಂದೆ.**

ಮಾತು ಹಾಗೂ ನಡೆಗಳ ಬಗ್ಗೆ ವಿವರಿಸುತ್ತಾ ಅವು ಒಂದಕ್ಕೊಂದು ಪೂರಕವಾಗಿರಬೇಕು. ಒಂದು ವೇಳೆ ಅವು ದೋಷಪೂರಿತವಾಗಿದ್ದರೆ, ಅವೆರಡು ಅಪ್ರಯೋಜಕವಾಗುತ್ತವೆ. ಹೀಗಾಗಿ ಬದುಕಿನಲ್ಲಿ ಒಂದು ಗುರಿಯನ್ನು ಇಟ್ಟುಕೊಂಡು ಅದಕ್ಕಾಗಿ ಬದುಕನ್ನು ಮುಡಿಪಾಗಿಡುವುದೇ ನಿಜವಾದ ಜ್ಞಾನ ಎನ್ನುತ್ತಾಳೆ ಮುಕ್ತಾಯಕ್ಕ.

ವಚನಕಾರರಲ್ಲಿ ಯಾವಾಗಲೂ ನಡೆ ಮತ್ತು ನುಡಿಯ ಬಗ್ಗೆ ವಿಷಯ ಪ್ರಸ್ತಾವವಾಗುತ್ತಲಿರುತ್ತದೆ. ಅವರು ನಡೆ ನುಡಿ ಒಂದಾಗಿಸಿಕೊಂಡು ಸತ್ಯ, ಶುದ್ಧ ಕಾಯಕ-ದಾಸೋಹ ಜೀವಿಗಳಾಗಿದ್ದರು. ಆದ್ದರಿಂದ ಅವರ ಅಂತರಂಗ ಹಾಗೂ ಬಹಿರಂಗ ಶುದ್ಧವಾಗಿತ್ತು. ಶರಣರಿಗೆ ಸಾಹಿತ್ಯ ಬರೆಯುವ ಉದ್ದೇಶಕ್ಕಿಂತ, ಧರ್ಮ ಕಟ್ಟುವ ಉದ್ದೇಶಕ್ಕಿಂತ ಉತ್ತಮ ಮನುಷ್ಯ, ಉತ್ತಮ ಸಮಾಜ ಕಟ್ಟುವ ಉದ್ದೇಶ ಬಹಳ ಮುಖ್ಯವಾಗಿತ್ತು. ವಚನ ಕೇವಲ ಒಂದು ಸಾಹಿತ್ಯ ರೂಪದಲ್ಲಿ ಬರೆಯದೇ, ಜೀವನ ವಿಧಾನವಾಗಿ ಬರೆದುದ್ದು. ಚಳುವಳಿ ರೂಪ ತಾಳಿದ್ದು, ನಡೆ ನುಡಿ ಒಂದಾದ ಅನುಭವ ನುಡಿಗಳೇ ವಚನಗಳು. ಸ್ತ್ರೀಯರು, ಸಮಾಜದ ಸಾಮಾನ್ಯರು ಕೂಡಾ ಎತ್ತರಕ್ಕೆ ಏರಬಲ್ಲರು ಎಂಬುದನ್ನು ಸಾಬೀತು ಪಡಿಸಿದ್ದೇ ವಚನ ಕ್ರಾಂತಿ.

**ಅಕ್ಕಮ್ಮ:**

ಕ್ರಿ.ಶ. 1160ರಲ್ಲಿ ಇದ್ದಿರಬಹುದಾದ ಅಕ್ಕಮ್ಮ ಎಂಬ ಶಿವಶರಣೆಯ ಹೆಸರೊಂದನ್ನು ಬಿಟ್ಟರೆ, ಈಕೆಯ ಯಾವ ಹಿನ್ನೆಲೆ ದೊರಕುವುದಿಲ್ಲ. ಈಕೆ ರಚಿಸಿದ 'ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ' ಎಂಬ ಅಂಕಿತದಲ್ಲಿ ಈವರೆಗೆ 154 ವಚನಗಳು ದೊರಕಿರುತ್ತವೆ. ವಚನಗಳ ಮೂಲಕ ಅಕ್ಕಮ್ಮನ ವ್ಯಕ್ತಿತ್ವವನ್ನು ಅರಿಯಬಹುದಾದರೂ ಅಧ್ಯಯನಾಸಕ್ತರಿಗೆ ತೃಪ್ತಿ ಸಿಕ್ಕುವುದಿಲ್ಲ. ಈಕೆಯ ಎಲ್ಲಾ ವಚನಗಳು ಸಾಮಾನ್ಯವಾಗಿ ವ್ರತಾಚರಣೆಯ ಹಾಗೂ ಮಾಹೇಶ್ವರ ಸ್ಥಳದ ವಿಷಯ ವಸ್ತುಗಳನ್ನು ತಿಳಿಯಪಡಿಸುತ್ತವೆ. ಸಮಾಜದಲ್ಲಿ ಆಳವಾಗಿ ಬೇರೂರಿದ್ದ ಮೂಢನಂಬಿಕೆ, ಅಂಧಶ್ರದ್ಧೆ, ಅರ್ಥಹೀನ ಸಂಪ್ರದಾಯಗಳನ್ನು ಅಕ್ಕಮ್ಮ ತನ್ನ ವಚನಗಳಲ್ಲಿ ಟೀಕಿಸಿದ್ದಾಳೆ. ಮುಖ್ಯವಾಗಿ ಕಾಯಕದಲ್ಲಿ ಹೇಗೆ ತನ್ನದೇ ಆದ ವ್ರತಾಚಾರವನ್ನು ನಿಷ್ಠೆಯಿಂದ ನಡೆಸಬೇಕೆಂದು ತನ್ನ ವಚನದಲ್ಲಿ ಈ ರೀತಿ ಹೇಳಿದ್ದಾರೆ:

**ತಾ ಮಾಡುವ ಕೃಷಿಯ ಮಾಡುವನ್ನಬರ ಮಾಡಿ**
**ಕೃಷಿ ತೀರಿದ ಮೇಲೆ ಮತ್ತೆ ಗುರುದರ್ಶನ ಲಿಂಗಪೂಜೆ ಜಂಗಮಸೇವೆ**
**ಶಿವಭಕ್ತರ ಸುಖ ಸಂಭಾಷಣೆ ಶರಣರ ಸಂಗ**
**ಈ ನೇಮವನರಿವುತಿಪ್ಪುದು ಸದ್ಭಕ್ತನ ಸದಾತ್ಮನ ಯುಕ್ತಿ**
**ಆಚಾರವೆ ಪ್ರಾಣವಾಗಿಪ್ಪ ರಾಮೇಶ್ವರಲಿಂಗಕ್ಕೆ**
**ಆತನ ಚೇತನಭಾವ. (ವ. 407)**

ಕೃಷಿ ಕಾಯಕದಲ್ಲಿ ನಿರತನಾದಾಗ ಗುರುಲಿಂಗಜಂಗಮರನ್ನು ಮರೆಯಬೇಕು. ಸ್ವಾರ್ಥ ಚಿಂತನೆಯನ್ನು ಮಾಡದೇ ಅತ್ಯಂತ ನಿಷ್ಠೆಯಿಂದ, ತನುಮನದಲ್ಲಿ ಭಗವಂತನ ಧ್ಯಾನದಲ್ಲಿ ಕಾಯಕ ಮಾಡಬೇಕು. ಈ ಕಾಯಕ ಪೂರ್ಣಗೊಂಡ ನಂತರ ಗುರುಲಿಂಗ ಜಂಗಮರ ಸೇವೆಯನ್ನು ಮಾಡಲು ಮುಂದಾಗಬೇಕು. ಅವರ ಸುಖ-ದುಃಖದಲ್ಲಿ ಪಾಲ್ಗೊಂಡು ತನ್ನ ಕೈಲಾದಷ್ಟು ಸಹಾಯ-ಸಹಕಾರಗಳನ್ನು ಮಾಡಬೇಕು. ಇಂತಹ ನೇಮ ನೀತಿಗಳು ಒಬ್ಬ ಸದ್ಭಕ್ತನ ಯುಕ್ತಿಯ ವರ್ಚಸ್ಸಿಗೆ ಪೂರಕವಾಗಿರುತ್ತವೆ ಎಂಬುದು ಅಕ್ಕಮ್ಮನ ಅಭಿಪ್ರಾಯ. ಈ ಅಕ್ಕಮ್ಮನ ವಚನವು 'ಕಾಯಕದಲ್ಲಿ ನಿರತನಾದಡೆ ಗುರುದರ್ಶನವಾದರೂ ಮರೆಯಬೇಕು...' ಎಂಬ ಆಯ್ದಕ್ಕಿ ಮಾರಯ್ಯನ ವಚನದ ಭಾವವನ್ನು ಪ್ರತಿಧ್ವನಿಸುತ್ತದೆ.

ಸರ್ವ ಜೀವಿಗಳನ್ನು, ಅದರಲ್ಲೂ ಮಾನವೀಯ ಮೌಲ್ಯಗಳನ್ನು ಬದುಕಿನುದ್ದಕ್ಕೂ ಅನುಸರಿಸಿಕೊಂಡು ಎಲ್ಲರೂ ಒಪ್ಪುವಂತೆ ಬಾಳುವುದೇ ಮಾನವನ ಶ್ರೇಷ್ಠ ಗುಣ. ಬಸವಣ್ಣನವರಂತೇ 'ಇವನಾರವ ಇವನಾರವ ಎನ್ನದೆ ಇವನಮ್ಮವ ಇವನಮ್ಮವ' ಎಂದು ಅಪ್ಪಿಕೊಳ್ಳುವ ಅಂತಃಕರಣವೇ ಅದ್ವಿತೀಯವಾದ ಆಚಾರ. ಪ್ರತಿಯೊಬ್ಬರೂ ತಮ್ಮ ತಮ್ಮ ಆಚಾರವಿಚಾರಗಳನುಗುಣವಾಗಿ ನಡೆದುಕೊಂಡರೆ ಸಮಾಜದಲ್ಲಿ ಯಾವ ಅನಾಹುತಗಳು ಇರಲಾರವು. ಇದನ್ನೇ ಅಕ್ಕಮ್ಮ ತನ್ನ ವಚನದಲ್ಲಿ ತಿಳಿಸಿದ್ದಾರೆ:

**ತನ್ನಾಚಾರಕ್ಕೆ ಬಂದವರು ತನ್ನವರೆಂದು ಭಾವಿಸಬೇಕಲ್ಲದೆ,**
**ತನ್ನಾಚಾರಕ್ಕೆ ಹೊರಗಾದವರ ಅಣ್ಣತಮ್ಮನೆಂದು**
**ತಾಯಿತಂದೆ ಎಂದು, ಹೊನ್ನು ಮಣ್ಣು ಹೆಣ್ಣಿನವರೆಂದು**
**ಅಂಗೀಕರಿಸಿದಡೆ, ಅವರಂಗಣವ ಕೂಡಿದಡೆ,**
**ಅವರೊಂದಾಗಿ ನುಡಿದಡೆ, ಭಕ್ತರು ಸತ್ತರಿಗೆ ಮುನ್ನವೆ ಹೊರಗು**
**ಆಚಾರವೇ ಪ್ರಾಣವಾದ ರಾಮೇಶ್ವರಲಿಂಗವು ಅವರನ್ನೊಳಗಿಟ್ಟುಕೊಳ್ಳ. (ವ. 412)**

ನಡೆ ನುಡಿ ಒಂದಾಗಿ, ಸಮಾನ ಮನಸ್ಸಿನ ಆಚಾರ ವಿಚಾರದಲ್ಲಿ ಒಂದಾಗಿರುವವರ ಕೂಡಾ ಬದುಕು ಸವೆಸಿದಾಗ ಸರ್ವಾಂಗ ಸುಂದರಮಯವಾಗುತ್ತದೆ. ಅಂತಹವರ ಜೊತೆ ಸ್ನೇಹ-ಸಂಬಂಧಗಳು ಉತ್ತಮವಾಗಿರುತ್ತವೆ. ಒಂದು ವೇಳೆ ಪರಂಪರೆಯಿಂದ ಬಂದ ಆಚಾರ ವಿಚಾರಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವವರ ಅಥವಾ ಆಚಾರವನ್ನನುಸರಿಸದೇ ಬರೀ ತರ್ಕ ವಿವಾದ ಮಾಡುವವರ ಸಂಗ ಬೇಡವೇ ಬೇಡ ಎಂದು ಅಕ್ಕಮ್ಮ ಹೇಳಿದ್ದಾಳೆ. ಹಾಗೆಯೇ ಅಂತವರನ್ನು ಅಣ್ಣತಮ್ಮ, ತಾಯಿತಂದೆ ಹಾಗೂ ಹೊನ್ನು ಮಣ್ಣು ಹೆಣ್ಣಿಗೆ ಸಮ್ಮತಿ ಸೂಚಿಸುವುದು ಸರಿಯಲ್ಲ.

ಅವರ ಅಂಗಳವ ತುಳಿಯದೇ ಅವರೊಂದಿಗೆ ಮಾತಾಡಿದರೆ, ಭಕ್ತರಾಗಿದ್ದೂ ಸುಳ್ಳಾಡಿದಂತೆಯೇ ಸರಿ. ಇಂಥವರನ್ನು ರಾಮೇಶ್ವರಲಿಂಗ ಮೆಚ್ಚಲಾರ ಹಾಗೂ ಎಂದೆಂದಿಗೂ ಒಳಗೆ ಬಿಟ್ಟುಕೊಳ್ಳಲಾರನೆಂಬ ಸಂಗತಿಯನ್ನು ಅಕ್ಕಮ್ಮ ವ್ಯಕ್ತಪಡಿಸಿದ್ದಾಳೆ.

**ಉಪಸಂಹಾರ:**

ಒಟ್ಟಾರೆ ಶರಣರು ಶರಣೆಯರಿಗೆ ಕೊಟ್ಟಿರುವ ಪೂಜ್ಯ ಭಾವನೆಯಿಂದ ಅಥವಾ ಗೌರವ ಮರ್ಯಾದೆಗಳಿಂದ ಅವರು ಮೇಲಕ್ಕೆ ಬಂದರೋ, ಶರಣರಂತೆ ತಮಗೂ ಸ್ವಾತಂತ್ರ್ಯ, ಅಭಿವ್ಯಕ್ತಿ ಇದೆ ಎಂದುಕೊಂಡು ಧೈರ್ಯವಾಗಿ ಶರಣೆಯರು ಪರಿಣಾಮಕಾರಿಯಾಗಿ ಅನಾವರಣಗೊಂಡಿದ್ದರಿಂದ ಅದರಲ್ಲಿ ಎಲ್ಲರೂ ಭಾಗವಹಿಸಿದ್ದು ಭವ್ಯ ಇತಿಹಾಸ. ಹೀಗೆ ಶರಣೆಯರು ಸ್ವಾಭಿಮಾನದಿಂದ ತಮಗೆ ಒಗ್ಗುವ ಕಾಯಕವನ್ನು ಕೈಗೊಂಡು ಮೌಲಿಕ ಬದುಕನ್ನು ಕಟ್ಟಿಕೊಂಡಿದ್ದರೆಂಬುದು ಅವರ ವಚನಗಳ ಮೂಲಕ ತಿಳಿದುಬರುತ್ತದೆ.

**ಪರಾಮರ್ಶನ ಗ್ರಂಥಗಳು:**

1. ಬಸವ ಸಮಿತಿ (ಸಂ), (2017), ಬಸವೇಶ್ವರ ಸಮಕಾಲೀನರು, ಬೆಂಗಳೂರು: ಬಸವ ಸಮಿತಿ.
2. ಬಸವರಾಜ ಸಬರದ, (2010), ವಚನ ಚಳುವಳಿ, ಬೆಂಗಳೂರು: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು.
3. ರಾಜಶೇಖರ ಜಮದಂಡಿ, (2009), ವಚನ ಸಾಹಿತ್ಯದಲ್ಲಿ ಪ್ರತಿಭಟನೆ, ಮೈಸೂರು: ಅಖಿಲ ಕರ್ನಾಟಕ ವಚನ ಸಾಹಿತ್ಯ ಪರಿಷತ್ತು.